ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಗಂಡಸರೇಕೆ ಹೈಹೀಲ್ಡ್ ಚಪ್ಪಲಿ ಧರಿಸುವುದಿಲ್ಲ?*




ಅದನ್ನು ಧರಿಸಲು ಬೇಕಾದ ನಡೆ, ನಡು ಎರಡೂ ಇಲ್ಲದ್ದರಿಂದ!

ಹೆಚ್.ಆರ್. ಕಡಿವಾಲ, ಬದಾಮಿ
*ನಮ್ಮ ಯುವಕ-ಯುವತಿಯರು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗಲು ಕಾರಣವೇನು?*
ಇವರು ಮಾರುಹೋಗುವಂತೆ ಮಾರುವುದರಲ್ಲಿ ಅವರು ನಿಷ್ಣಾತರು!

ಗಾಯತ್ರಿ, ರಾಜಾಜಿನಗರ
*ದೇವರು ತುಂಬಾ ಪಕ್ಷಪಾತಿ; ನೀವೇನಂತೀರಾ..?*
ತುಂಬಾ ಪಕ್ಷಗಳಿಗೆ ಪಾತಿ!

ಪಿ.ಎಸ್.ಶ್ರೀವತ್ಸ, ಬೆಂಗಳೂರು
*ಇತ್ತೀಚೆಗೆ ಉತ್ಥಾನ ದ್ವಾದಶಿ, ಬಕ್ರೀದ್ ಮುಂತಾದ ಹಿಂದೂ-ಮುಸ್ಲಿಮ್ ಹಬ್ಬಗಳು ಒಟ್ಟಿಗೆ ಬರುತ್ತಿವೆಯಲ್ಲಾ...?*



ಗುಡ್. ದಿನಾಂಕದಲ್ಲಿ ಇರುವ ಐಕ್ಯತೆ ಜನಾಂಗದಲ್ಲಿ ಮೂಡಿದರೆ ಇಲ್ಲೇ ನಾಕ!

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಕತ್ತಲಲ್ಲಿ ಕರಡಿಗೆ ಜಾಮೂನು ತಿನ್ನಿಸಬಾರದು ಇದು ಯಾವ ಪ್ರಕಾರದ ಸಾಹಿತ್ಯ?*
ಯೋಗ್ಯತೆಗಿಂತಲೂ ಯೋಗದ ಮೇಲೆ ರಾಜರಾದವರ ಸಾಹಿತ್ಯ!

ಹಾಡ್ಯ ಬಿ. ಜಯಾನಂದ, ಮೈಸೂರು
*ಸ್ವಾಮೀಜಿಗಳು, ಸಾಹಿತಿಗಳು, ಪತ್ರಕರ್ತರು ಇತ್ತೀಚೆಗೆ ತಿಕ್ಕಲುತನದಲ್ಲಿ ರಾಜಕಾರಣಿಗಳನ್ನೂ ಮೀರಿಸುತ್ತಿದ್ದಾರಲ್ಲಾ...?*
ಚೇಳಿಗೆ ಪಾರುಪತ್ಯ ಕೊಟ್ಟರೆ ಕುಟುಕುವುದು ಸಹಜವೇ!

ಎನ್. ಪ್ರಕಾಶ್, ದೇವನಹಳ್ಳಿ
*ಅನ್ಯಾಯದಿಂದ ಸಂಪಾದನೆ ಮಾಡಿದ ತಂದೆಯ ಆಸ್ತಿ ಮಕ್ಕಳನ್ನು ಯಾವ ದಾರಿಗೆ ತಳ್ಳಬಹುದು?*
ಲಾಂಗ್ ರೂಟ್ ಮೂಲಕ ರೌಡಿ ಸ್ಟ್ರೀಟ್, ಎಲೆಕ್ಷನ್ ಡ್ರೈವ್‌ಗಳಲ್ಲಿ ಸಾಗುತ್ತಾ ಹಗರಣದ ಹಾದಿಗೆ.

ರಾಜೇಂದ್ರ ಹೆಗಡೆ, ಹಾವೇರಿ
*ರಾಮ್‌ರವರೇ, ನಿಮ್ಮ ಉತ್ತರಗಳಿಂದ ಪ್ರಶ್ನೆ ಕೇಳುವವರು ಯಾವ ರೀತಿ ಉದ್ಧಾರವಾಗಿದ್ದಾರೆ?*
ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕಳುಹಿಸಿದ ಹಲವಾರು ಓದುಗರ ಕೈಬರಹ ಉತ್ತಮಗೊಂಡಿದೆ!

ಕಂಡಕ್ಟರ್ ರಾಜು, ಗುಬ್ಬಿ
*ಮುತ್ತು ಕೊಡುವವಳು ಬಂದಾಗ ತುತ್ತು ಕೊಟ್ಟವರನ್ನು ಮರೆಯುವುದು ತಪ್ಪಲ್ವಾ?*
ಇವಳಿಂದ ಅವರಿಗೊಂದು ಮಮತೆಯ ಮುತ್ತು, ಅವರಿಂದ ಇವಳಿಗೊಂದು ತುತ್ತು ಕೊಡಿಸಿ; ಪ್ರಾಬ್ಲಮ್ ಸಾಲ್ವ್ಡ್!

ಗೀತಾ ಬರ್ಲ, ಬೆಂಗಳೂರು
*ಹಗಲು ಕಂಡ ಬಾವಿಗೆ ರಾತ್ರಿ ಬೀಳುತ್ತಾರಲ್ಲಾ, ಇವರಿಗೆ ಏನನ್ನ ಬೇಕು?*
ಇನ್ಮೇಲೆ ಎಲ್ಲೇ ಹೋಗಬೇಕಾದ್ರೂ ಒಂದು ಟೈರ್ ಕಟ್ಕೊಂಡು ಓಡಾಡಿ ಎಂದು!

ನರಸಿಂಹ ಎಂ. ಪೈ, ಕಾಸರಕೋಡ
*ಮರ ಮತ್ತು ಮಗನಿಗೆ ಏನು ಅಂತರ?*
ಮಗ ಮಸಣದವರೆಗೆ ಮಾತ್ರ ಬರಬಲ್ಲ; ಮರ ಕಾಫಿನ್ ಆಗಿ ಜೊತೆಗಿರುತ್ತದೆ ಅಥವಾ ಚಿತೆಯಾಗಿ ಜೊತೆಗೇ ಉರಿಯುತ್ತದೆ.

ಎನ್. ಗೋಪಾಲರಾವ್, ಬೆಂಗಳೂರು
*ಮಿಝೋರಾಮ್‌ನಲ್ಲಿ 39 ಪತ್ನಿಯರಿಗೆ ಒಬ್ಬನೇ ಗಂಡನಂತೆ! ಹುಟ್ಟಿದರೆ ಮಿಝೋರಾಮ್‌ನಲ್ಲಿ ಗಂಡಸಾಗಿ ಹುಟ್ಟಬೇಕು ಅಲ್ಲವೇ?*
ಕೊಂಚ ಯೋಚಿಸಿ; ಒಂದು ವೇಳೆ 39 ಪತ್ನಿಯರ ಬಟ್ಟೆಯನ್ನು ಒಗೆಯಬೇಕಾದರೆ...?

ಮಹಾಲಿಂಗ ಎಂ. ಗೋರಬಾಳ
*ನದಿಗಳಿಗೆ ಹೆಣ್ಣಿನ ಹೆಸರನ್ನೇ ಏಕೆ ಇಡುತ್ತಾರೆ?*
ಹೋದ ಜಾಗವನ್ನೆಲ್ಲಾ ಹಸಿರಾಗಿ, ಸಮೃದ್ಧಿಯಾಗಿ, ತಂಪಾಗಿ ಇಡುವ ಗುಣ ಇರುವುದರಿಂದ.

## ಬಹುಮಾನಿತ ಪ್ರಶ್ನೆ

ಪೈಂಟರ್ ಪಾಪು, ಸಂತೆಮರಹಳ್ಳಿ
*ಮರ ಬೆಳೆಯುವುದಕ್ಕೂ, ಮನುಷ್ಯ ಬೆಳೆಯುವುದಕ್ಕೂ ಇರುವ ವ್ಯತ್ಯಾಸವೇನು?*
ಮರ ಕೊಡಲಿ ಬೇಡ ಎನ್ನುತ್ತದೆ, ಮನುಷ್ಯ ಕೊಡಲಿ, ಕೊಡಲಿ, ಅವರೂ ಕೊಡಲಿ, ಇವರೂ ಕೊಡಲಿ ಎನ್ನುತ್ತಾನೆ!

ಮಾಲತಿರಾಜು, ಬೆಂಗಳೂರು
*ಹಗರಣಗಳ ಸರದಾರ ಪ್ರಶಸ್ತಿಗೆ ಒಬ್ಬ ಅರ್ಹ ವ್ಯಕ್ತಿಯ ಹೆಸರನ್ನು ತಿಳಿಸಿ?*
ಸಾಧ್ಯವಿಲ್ಲ; ರಾಜ್ಯ ಪ್ರಶಸ್ತಿಯಂತೆಯೇ ಕನಿಷ್ಠ 50 ಜನ ಕನಿಷ್ಠರಿಗಾದರೂ ಕೊಡಲೇಬೇಕು!

ಡಿ.ಎಲ್. ಶ್ವೇತಾ, ಚನ್ನಗಿರಿ
*ಮರಣದಂಡನೆಗೂ, ಆತ್ಮಹತ್ಯೆಗೂ ಏನಾದರೂ ವ್ಯತ್ಯಾಸವಿದೆಯಾ?*
ಒಂದಕ್ಕೆ ಸರ್ವ್ ಮಾಡುವವರು ಇರಬೇಕು, ಮತ್ತೊಂದು ಸೆಲ್ಫ್ ಸರ್ವೀಸ್!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಮೀನುಗಳಲ್ಲಿ ಯಾವ ಮೀನು ನಿಮಗೆ ಹೆಚ್ಚು ಇಷ್ಟ?*



ಜಮೀನು!

ವಿ. ಹಮೀದ್, ವಿಟ್ಲ
*ಶಿಕ್ಷಕಿಯನ್ನೇ ಲವ್ ಮಾಡುವ ಕಾಲೇಜು ಹುಡುಗರಿಗೆ ನಿಮ್ಮ ಕಿವಿಮಾತು?*
ಕಾಮಕ್ಕೆ ಫುಲ್‌ಸ್ಟಾಪ್ ಇಟ್ಟು ಪ್ರೀತಿಯ ಶಿಕ್ಷಕಿ ಎಂದು ಲವ್ ಮಾಡಿದರೆ ಏನೇನೂ ತಪ್ಪಿಲ್ಲ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ರಾಜಕಾರಣಿಗಳ ಮೇಲೆ ಚಪ್ಪಲಿ ಎಸೆಯುವುದು ಬೂಟಾಟಿಕೇನಾ?*
ಬೂಟ್ ಆಟಿಕೆಯೂ ಹೌದು. ಆದರೆ... ಉಂಗುಷ್ಟದ ಬೆಲೆಯೂ ಇಲ್ಲದವರತ್ತ ಚಪ್ಪಲಿ ಎಸೆದರೆ ಸನ್ಮಾನಿಸಿದಂತೆ ಆದೀತೋ ಏನೋ...!

ಎಸ್. ಕೃಷ್ಣಮೂರ್ತಿ, ಬೆಂಗಳೂರು
*ನೀವು ನಿಮ್ಮ ಹೆಂಡತಿಗೆ ಎಂದಾದರೂ ಹೊಡೆದಿದ್ದೀರೋ ಅಥವಾ ಅವರಿಂದಲೇ ಹೊಡೆಸಿಕೊಂಡಿದ್ದೀರೋ?*
ಹೊಡೆದಿದ್ದೇನೆ- ಸಲಾಮನ್ನು, ಹೊಡೆಸಿಕೊಂಡಿದ್ದೇನೆ ಗೊರಕೆಯನ್ನು!

■ ರಾಮ್